# ಸ್ವರವಚನ ತವನಿಧಿ ಖನೆಲೆಯ ಕರಿಬಸವಾರ್ಯ

- **ಡಾ.ಮಹಾದೇವಿ ಆರ್. ಹಿರೇಮಠ**
ಕರ್ನಾಟಕ ಕಲಾ ಮಹಾವಿದ್ಯಾಲಯ,
ಧಾರವಾಡ–580001

ಸ್ವರವಚನ ಸಾಹಿತ್ಯ ಕನ್ನಡ ಸಾಹಿತ್ಯದಲ್ಲಿ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರವಾಗಿ ಬೆಳೆದು ಬಂದಿದ್ದು, ಹರಿದಾಸರ ಕೀರ್ತನ ಸಾಹಿತ್ಯದಷ್ಟೇ ಇದು ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಇದರ ಒಳತಿರುಳು ಧರ್ಮ, ಆಧ್ಯಾತ್ಮ, ನೀತಿ, ತತ್ವಗಳೇ ಆಗಿದ್ದರೂ ಅದರ ಜನಸಮ್ಮುಖವಾದ ಧೋರಣೆ, ಸರಳವಾದ ಭಾಷೆ, ಬಹುಬೇಗ ಜನಮನವನ್ನು ಸೂರೆಗೊಳ್ಳಬಲ್ಲ ಹಾಡುಗಬ್ಬದ ಪ್ರಕಾರಗಳಿಂದಾಗಿ ಕಾಲಕಾಲಕ್ಕೆ ಜನಪ್ರೀಯತೆಯನ್ನು ಪಡೆಯುತ್ತ ಬಂದಿದೆ. ಸ್ವರವಚನ ಎಂದು ಹೆಸರೇ ಹೇಳಿಕೊಳ್ಳುವ ಹಾಗೆ 'ಸ್ವರ' ಹಾಗೂ 'ವಚನ' ಎಂಬ ಎರಡು ಶಬ್ದಗಳಿಂದ ಷನ್ನವಾದ ಸಂಯುಕ್ತ ಪದ ಇದಾಗಿದ್ದು ಸ್ವರ ಎಂದರೆ 'ಧ್ವನಿ, ಧಾಟಿ, ರಾಗ, ಅಥವಾ ಹಾಡುವ ಪದ್ಧತಿ. ಈ ರೀತಿಯಾಗಿ ಸ್ವರವೆತ್ತಿ ಹಾಡಬಲ್ಲಂಥ ವಚನಗಳನ್ನೇ ವಿದ್ವಾಂಸರು ಸ್ವರಚನಗಳೆಂದು ಕರೆದಿದ್ದಾರೆ. "ಸ್ವರವಚನವು ಪದ, ಪದನು, ಸ್ವರಪದ ಬೆಡಗಿನ ಸ್ವರಪದ, ಸ್ವರ ಬೊಲ್ಲಿ, ಗೀತ, ವಚನ ರಾಗಲಲಿತ, ವಚನ, ಸ್ವರವಚನ ಎಂದು ವಿವಿಧ ನಾಮಾಂತರಗಳಿಂದ ಇದುವರೆಗೆ ಗುರುತಿಸಿಕೊಳ್ಳುತ್ತ ಬಂದಿದೆ."[1] ಸಾಮಾನ್ಯವಾಗಿ ಭಜನೆ ತತ್ವಪದ ಕೈವಲ್ಯಪದ ಅನುಭಾವ ಪದಗಳೆಂದು ಕರೆಯಲ್ಪಡುವ ಈ ಸಾಹಿತ್ಯಪ್ರಕಾರ ವ್ಯಾಪಕವಾದ ಅರ್ಥಗಳನ್ನು ಹೊಂದಿದೆ. 'ಸಾಧನಾವಸ್ಥೆಯಲ್ಲಿದ್ದ ಭಕ್ತನೊಬ್ಬ ತನ್ನ ಪಂಚೇಂದ್ರಿಯಗಳನ್ನು ಗೆಲ್ಲುವ ಶಕ್ತಿ ನೀಡೆಂದು ಪರಿಪರಿಯಾಗಿ ಭಜಿಸಿ ಹಾಡಿದ್ದು, 'ಭಜನೆ' ಎಂದು ಕರೆಯಿಸಿಕೊಂಡರೆ, ಅರಿಷಡ್ವರ್ಗಗಳನ್ನು ಜಯಿಸಿ, ಅಂಗ– ಲಿಂಗದಲ್ಲಿ ಲೀನವಾಗಿ ಸಂಗಸುಖದ ಸ್ವಾನುಭವವು ಹೃದಯ ತುಂಬಿ ಹರಿದು 'ಅನುಭಾವ ಪದ' ವೆಂದು ಕರೆಯಲ್ಪಟ್ಟಿತು. ಬುದ್ಧಿ ಪ್ರಧಾನವಾದ ತತ್ವ– ಚಿಂತನೆಗಳಿಗೆ ಭಾವುಕತೆಯ ನೆರೆ ಬಂದು, ರಾಗ –ಲಯ ಬದ್ಧವಾಗಿ ಭೋರ್ಗರೆದದ್ದು. 'ತತ್ವಪದ'ವಾದರೆ ಇಹ–ಪರಗಳ ಭೇದ ಮರೆತು ತನ್ನ ತಾನರಿದು ಕೇವಲತ್ವದ ಸ್ಥಿತಿಗೇರಿ ಆನಂದಾನುಭೂತಿಯಲ್ಲಿ ಉಲಿದದ್ದು 'ಕೈವಲ್ಯ'ಪದ ವೆನಿಸಿಕೊಂಡಿತು.

ಸ್ವರವಚನಗಳಿಗೆ ಆದಿಯಲ್ಲಿ ಸಾಮಾನ್ಯವಾಗಿ ರಾಗ ನಿರ್ದೇಶನವಿದ್ದು, ವಿರಳವಾಗಿ ತಾಳ ನಿರ್ದೇಶನವಿರುತ್ತದೆ. ಗೇಯ ಪ್ರಧಾನವಾದ ಹಾಡುಗಳು ಅಂಶ ಛಂದಸ್ಸಿನಲ್ಲಿರುತ್ತವೆ. ಸಾಮಾನ್ಯವಾಗಿ ಆದಿಪ್ರಾಸ ಪ್ರತಿ ಚರಣದಲ್ಲಿದ್ದು ಕೆಲವೆಡೆ ಅಂತ್ಯಪ್ರಾಸ, ಅಲ್ಲಲ್ಲಿ ಮಧ್ಯ ಪ್ರಾಸಗಳೂ ಬರುವುದುಂಟು. ಈ ಎಲ್ಲ ಸ್ವರೂಪ ಲಕ್ಷಣಗಳುಳ್ಳ ಹೊಂದಿರುವ ಸ್ವರವಚನಗಳು, ಮೊದಲಮೊದಲು ಗುರು–ಲಿಂಗ ಜಂಗಮದ ವರ್ಣನೆ, ಶಿವಸ್ತುತಿ, ಶಿವಶರಣರ ಕುರಿತಾದ ಸ್ತೋತ್ರಗಳು. ಮೊದಲಾದ ಭಕ್ತಿ– ವೈರಾಗ್ಯ–ಅಧ್ಯಾತ್ಮಗಳಿಗೆ ಸೀಮಿತಗೊಂಡಿದ್ದರೆ, ಬರುಬರುತ್ತ, ಆತ್ಮನಿವೇದನೆ, ಶರಣಸತಿ, ಲಿಂಗಪತಿ ಭಾವ, ನೀತಿಬೋಧನೆ, ಮತ್ತು ಜಾತಿ–ಕುಲ–ಶೀಲ–ಮಡಿ–ಮೈಲಿಗೆಗಳ ಕುರಿತಾದ ಲೋಕವಿಡಂಬನೆಯನ್ನು ಒಳಗೊಂಡವು. ಒಟ್ಟಿನಲ್ಲಿ ಹೇಳುವುದಾದರೆ "ಪ್ರಾರ್ಥನೆ ಆತ್ಮನಿವೇದನೆಗಳ ಪ್ರೇರಣೆಯಿಂದ ಹುಟ್ಟಿ, ವೀರಶೈವ ಸಿದ್ಧಾಂತ ಪ್ರತಿಪಾದನೆಯ ಧೋರಣೆಯಿಂದ ಬೆಳೆದು ಅನಂತರ ಲೋಕನೀತಿಯನ್ನು ತೆಕ್ಕೈಸಿಕೊಂಡ ಈ ಸ್ವರವಚನ ಸಾಹಿತ್ಯವು ತನ್ನದೇ ಆದ ಹಲವಾರು ವೈಶಿಷ್ಟಗಳಿಂದ ಸ್ವತಂತ್ರವಾಗಿ ಸಮೃದ್ಧವಾಗಿ ಬೆಳೆದುಬಂದಿದೆ."[2]

ಉತ್ತರ ಕರ್ನಾಟಕದ ಭಾಗದಲ್ಲಿ ಸ್ವರವಚನ ಸಾಹಿತ್ಯದ ಸೃಷ್ಟಿ–ಪ್ರಚಾರ– ಪ್ರಭಾವ ಅಧಿಕವಾಗಿದೆ. ಇವುಗಳನ್ನು ರಚಿಸಿ ಹಾಡಿದವರು ಶಿವಶರಣರು, ಅನುಭಾವಿ ಕವಿಗಳು, ಮತ್ತು ಸಾಧು–ಸಂತರು. ಸ್ವರವಚನ ಸಾಹಿತ್ಯಕ್ಕೆ ಸುಮಾರು ಎಂಟುನೂರು ವರ್ಷಗಳ ಸುದೀರ್ಘ ಇತಿಹಾಸವಿದ್ದು, ಈ ಬಗೆಯ ಹಾಡುಗಳನ್ನು ಮೊಟ್ಟಮೊದಲು ಬರೆದವರು ಬಸವಯುಗದ ಶಿವಶರಣರು. ಜೇಡರ ದಾಸಿಮಯ್ಯನಿಂದ ಆರಂಭಗೊಂಡ ಈ ಸಾಹಿತ್ಯ ಸಕಲೇಶ ಮಾದರಸ, ಬಸವಣ್ಣ, ಚೆನ್ನಬಸವಣ್ಣ, ಅಲ್ಲಮ, ಅಕ್ಕಮಹಾದೇವಿ, ನೀಲಮ್ಮ, ಆದಯ್ಯ, ಮಡಿವಾಳ ಮಾಚಯ್ಯ ಮೊದಲಾದ 25 ಜನ ಶಿವಶರಣರಿಂದ ಸೃಷ್ಟಿಯಾದವು. ಆದರೆ ಅವರ ಸ್ವರವಚನಗಳಿಗಿಂತ ವಚನಗಳೇ ಹೆಚ್ಚು ಪ್ರಚಾರ ಪಡೆದವು. ಈ ಸಾಹಿತ್ಯ ಮುಂದೆ ನಿಜಗುಣ ಶಿವಯೋಗಿಗಳ ಕೈಯಲ್ಲಿ ಕೈವಲ್ಯಕ್ಕೇರಿ ಮುಪ್ಪಿನ ಷಡಕ್ಷರಿ, ಸರ್ಪಭೂಷಣ ಶಿವಯೋಗಿ, ಬಾಲಲೀಲಾ

ಮಹಾಂತ ಶಿವಯೋಗಿ, ಮೈಲಾರ ಬಸವಲಿಂಗ ಶರಣರು, ಕೂಡಲೂರು ಬಸವಲಿಂಗ ಶರಣರು, ಘನಮಠದ ನಾಗಭೂಷಣ ಶಿವಯೋಗಿ, ರಾಮಪುರದ ಬಕ್ಕಪ್ಪಯ್ಯ, ಕಡಕೋಳ ಮಡಿವಾಳಪ್ಪ, ಶಿಶುನಾಳದ ಷರೀಫ ಮುಂತಾದವರ ಅವಧಿಯಲ್ಲಿ ತುಂಬಾ ವ್ಯಾಪಕತೆಯನ್ನು ಪಡೆಯಿತು. ಹತ್ತೊಂಬತ್ತನೆ ಶತಮಾನದವರೆಗೂ ಅನೇಕ ಅನುಭಾವಿ ಕವಿಗಳು ಸ್ವರವಚನಗಳ ರಚನೆ ಮಾಡಿದ್ದು ಸ್ವರವಚನ ಸಾಹಿತ್ಯಕ್ಕೆ ಉತ್ತರ ಕರ್ನಾಟಕದ ಅದರಲ್ಲೂ ಕಲಬುರ್ಗಿ ಜಿಲ್ಲೆಯ ಕೊಡುಗೆ ಅತ್ಯಂತ ಗಮನಾರ್ಹವಾದದ್ದು. "ವೀರಶೈವ, ಬ್ರಾಹ್ಮಣ, ಮುಸ್ಲಿಂ, ಹರಿಜನರೆಂಬ ಕುಲಭೇದವಿಲ್ಲದೆ ಮೂವತ್ತಕ್ಕೂ ಹೆಚ್ಚು ಜನ ಸ್ವರವಚನಕಾರರು ಸ್ವರವಚನಗಳನ್ನು ರಚನೆ ಮಾಡಿದ್ದಾರೆ."[3]

ಕ್ರಿ.ಶ. 18ನೇ ಶತಮಾನ ಕನ್ನಡ ನಾಡಿನಲ್ಲಿ ಸಾಮಾಜಿಕ ರಾಜಕೀಯ, ಸಾಂಸ್ಕೃತಿಕ ದೃಷ್ಟಿಯಿಂದ ಪ್ರಕ್ಷುಬ್ಧ ಕಾಲ. ಆಗ ಕನ್ನಡ ನಾಡಿನಲ್ಲಿ ಹೇಳಿಕೊಳ್ಳುವಂತಹ ಯಾವುದೇ ರಾಜಮನೆತನಗಳಿಲ್ಲದ ಕಾರಣ ಸಂಸ್ಕೃತಿ ಸಂವರ್ಧನೆಯೂ ಕ್ಷೀಣಿಸತೊಡಗಿತ್ತು. ಚಿಕ್ಕಪುಟ್ಟ ಆಳರಸರ ನಡುವೆ ಮೇಲಿಂದ ಮೇಲೆ ನಡೆಯುವ ಘರ್ಷಣೆಗಳು, ಬ್ರಿಟೀಷರು ಕನ್ನಡ ನಾಡಿನಲ್ಲಿ ತಮ್ಮ ರಾಜಸತ್ತೆಯನ್ನು ಸ್ಥಾಪಿಸಲು ದಾರಿ ಮಾಡಿಕೊಟ್ಟವು. ನಾಡಿನ ಉತ್ತರದ ಭಾಗಗಳು ಪೇಶ್ವೆಗಳ ಹಾಗೂ ಹೈದರಾಬಾದ್ ನಿಜಾಮನ ರಾಜಸತ್ತೆಯಲ್ಲಿ ಸಿಕ್ಕಿ ಹಾಕಿಕೊಂಡಿದ್ದವು. ಒಂದೆಡೆ ಮರಾಠಿ, ಇನ್ನೊಂದೆಡೆ ಉರ್ದು, ಮತ್ತೊಂದೆಡೆ ಇಂಗ್ಲೀಷ್ ಭಾಷೆಯ ಒತ್ತಡದಿಂದಾಗಿ ಕನ್ನಡ ಭಾಷೆಗೆ ಉಸಿರು ಕಟ್ಟತೊಡಗಿತ್ತು.

ಇಂತಹ ಸಂದರ್ಭದಲ್ಲಿ ಯಾವುದೇ ರಾಜಶ್ರಯವೂ ಇಲ್ಲದೆ ಸ್ವತಂತ್ರ ನೆಲೆಯಲ್ಲಿ ನಿಂತು ಸಾಹಿತ್ಯ ಸೃಷ್ಟಿಗೈಯ್ಯುವುದರ ಮೂಲಕ ಕನ್ನಡ ಸಾಹಿತ್ಯಕ್ಕೆ ನವಚೇತನವನ್ನು ತುಂಬಿದವರು ವೀರಶೈವ ಮಠಾಧೀಶರು ಮತ್ತು ವೀರಶೈವ ಕವಿಗಳು. ಇಂತಹ ವೀರಶೈವ ಕವಿಗಳಲ್ಲಿ ಸಾರಕವಿಜನ ಸುಧಾಂಬುಧಿ ಪೂರ್ಣಾಚಂದ್ರನೂ ವೀರಶೈವಾಚಾರ ಮಾರ್ಗ ಪ್ರವರ್ತನೋದ್ಧಾರ ಸದ್ಗುಣಮಣಿಯೂ ಎನಿಸಿ 'ಕವೀಂದ್ರ ಶಾಬಕ'ನೆಂಬ ಬಿರುದು ಪಡೆದ ವೀರಶೈವ ಕವಿ, ಅನುಭಾವಿ, ಸ್ವರವಚನಕಾರ ಐನೆಲೆಯ ಕವಿ ಕರಿಬಸವಾರ್ಯನೂ ಒಬ್ಬ. ಕರಿಬಸವಾರ್ಯನ ಸಾಧನೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲೊಂದು ದಿಟ್ಟ ಹೆಜ್ಜೆ.

ಈ ದಿಶೆಯಲ್ಲಿ ಹೈದರಾಬಾದ ಕರ್ನಾಟಕದ ಸ್ವರವಚನಕಾರರ ಸಾಧನೆಯೂ ಅಪೂರ್ವವಾದುದು. ಏಕೆಂದರೆ ಯಾವುದೇ ರಾಜಾಶ್ರಯ ಮಠಮಾನ್ಯಗಳ ನೆರಳೂ ದೊರೆಯದೆ ಸಾಮಾನ್ಯರಲ್ಲಿ ಸಾಮಾನ್ಯರಾಗಿ ಸ್ವತಂತ್ರ ನೆಲೆಯಲ್ಲಿ ನಿಂತು, ವೈವಿಧ್ಯಮಯ ಸಾಹಿತ್ಯ ಸೃಷ್ಟಿ ಮಾಡುವುದರ ಮೂಲಕ ಕ್ಷೀಣದೆಸೆಯಲ್ಲಿದ್ದ ಅಂದಿನ ಸಾಹಿತ್ಯ ವಾಹಿನಿಗೆ ಹೊಸ ನೆರೆಯೊಂದನ್ನು ಸೇರಿಸಿ ಬಲಗೊಳಿಸಿದ ಕೀರ್ತಿ ಅಲ್ಲಿನ ಕವಿಗಳಿಗೆ ಸಲ್ಲುತ್ತದೆ. ಪ್ರಸ್ತುತ ಕರಿಬಸವಾರ್ಯ ವಿರಚಿತ ಸಾಹಿತ್ಯ ಸೃಷ್ಟಿಯು ಗಮನಾರ್ಹವಾಗಿದ್ದರೂ ಅವನ ಹೆಸರು ಕರ್ನಾಟಕ ಕವಿಚರಿತೆ ಮತ್ತು ಕನ್ನಡ ಸಾಹಿತ್ಯ ಚರಿತ್ರೆಗಳಲ್ಲಿ ದಾಖಲಾಗದೆ ನೆಲದ ಮರೆಯ ನಿಧಾನವಾಗಿ ಹಾಗೆಯೇ ಉಳಿದಿದೆ.

**ಕಾಲ–ಪರಿಸರ–ಜೀವನ :**

ಕರಿಬಸವಾರ್ಯನ ಜೀವನ ಚರಿತ್ರೆ ಇಂದು ಕಾಲಗರ್ಭದಲ್ಲಿ ಅಡಗಿ ಹೋಗಿದೆ. ಅವನ ವೈಯಕ್ತಿಕ ಜೀವನದ ಬಗೆಗೆ ಸ್ಪಷ್ಟವಾದ ದಾಖಲೆಗಳು ದೊರೆಯುವುದಿಲ್ಲ. "ಸುಕವೀಂದ್ರ ಶಾಬಕ' ಕವೀಂದ್ರ ಶಾಬಕ', 'ಶಾಬಕ ಕವಿ' ಎಂಬ ಬಿರುದನ್ನು ಹೊಂದಿದ್ದ ಕರಿಬಸವಾರ್ಯನನ್ನು ಸಂಗಮೇಶ್ವರ ಪುರಾಣದ ಕರ್ತೃವಾದ ಬಸವರಾಜ (ಕ್ರಿ.ಶ.1800) ಹಾಗೂ ಚತುರಾಚಾರ್ಯ ಪುರಾಣದ ಕರ್ತೃನಾದ ತಿಲಕಪುರದ ಸೋಮಕವಿ (ಕ್ರಿ.ಶ.1831) ಇವರುಗಳು ತಮ್ಮ ಕೃತಿಗಳ ಆದಿಯಲ್ಲಿ ಸ್ಮರಿಸಿದ್ದಾರೆ."[4]

ಇವರನ್ನು ಬಿಟ್ಟರೆ ಇಡಿಯಾಗಿ ಇಲ್ಲವೆ ಬಿಡಿಯಾಗಿ ಎಲ್ಲಿಯೂ ಕರಿಬಸವಾರ್ಯನ ಬಗೆಗೆ ವಿವರವಾದ ಮಾಹಿತಿಗಳು ಸಿಗುವುದಿಲ್ಲ, ಕವಿಯು ತನ್ನ ಕೃತಿಗಳಲ್ಲಿ ಪೂರ್ವದ ಸಂಸ್ಕೃತ ಕವಿಗಳಾದ ವ್ಯಾಸ, ಭಾಸ, ಭವಭೂತಿ, ಕಾಳಿದಾಸ, ಮಯೂರ, ದಂಡಿ, ಭಾರವಿ, ಮಾಘ, ಬಾಣ, ಉದ್ಭಟ ಮೊದಲಾದವರನ್ನೂ ಹಾಗೂ ಕನ್ನಡ ಕವಿಗಳಾದ ಹರಿಹರ, ರಾಘವಾಂಕ, ಚಾಮರಸ, ಭೀಮಕವಿ, ಪಾಲ್ಕುರಿಕೆಯ ಸೋಮನಾಥ, ಕೆರೆಯ ಪದ್ಮರಸ ಮೊದಲಾದವರನ್ನು ಸ್ಮರಿಸಿದ್ದಾನೆ. ಹಿರಿಯ ಸಮಕಾಲೀನರೂ ಅನುಭಾವಿಗಳೂ ಆದ ಬಕ್ಕಪ್ಪಯ್ಯ ಹಾಗೂ ಅಂಬಲಿಗೆ ಚೆನ್ನಮಲ್ಲಕವಿ ಮತ್ತು ಪವಾಡ ಪುರುಷ

ಕಲಬುರ್ಗಿ ಶರಣ ಬಸವ ಇವರನ್ನು ಸ್ಮರಿಸಿದ್ದಾನೆ. ಆದರೆ ತನ್ನ ವೈಯಕ್ತಿಕ ಜೀವನದ ಬಗ್ಗೆ ಯಾವ ಕೃತಿಗಳಲ್ಲಿಯೂ ಹೇಳಿಕೊಂಡಿಲ್ಲ. ಅವನು ರಚಿಸಿದ 'ಶ್ರೀ ಕುಮಾರ ವಿಜಯ ವಿಳಾಸ'ವೆಂಬ ಕೃತಿಯಲ್ಲಿ ಆತನ ಗುರುಪರಂಪರೆಯನ್ನು ಹೊರತುಪಡಿಸಿ, ವೈಯಕ್ತಿಕ ಜೀವನದ ಬಗ್ಗೆ, ಇತರೆ ಯಾವುದೇ ಹೆಚ್ಚಿನ ಅಂಶಗಳು ತಿಳಿದು ಬರುವುದಿಲ್ಲ. ಆದರೆ ಕರಿಬಸವಾರ್ಯನ ಬಾಲ್ಯ ಜೀವನ, ವಿದ್ಯಾಭ್ಯಾಸ, ಗೃಹಸ್ಥಜೀವನಗಳ ಕುರಿತಾಗಿ, ಹಾಗೂ ಸಾಹಿತ್ಯಕ ಪ್ರೇರಣೆ, ಆಧ್ಯಾತ್ಮಿಕ ಒಲವು ಇತ್ಯಾದಿಗಳ ಪರಿಚಯ ಇಂದಿಗೂ ಆ ಭಾಗದ ವಯೋವೃದ್ಧರ, ಹಿರಿಯ ಸಂಗೀತ ಹಾಗೂ ಸಾಹಿತ್ಯ ಪ್ರೇಮಿಗಳ ನೆನಪಿನಲ್ಲಿ ಮಸುಕು ಮಸಕಾಗಿ ಉಳಿದುಕೊಂಡಿದೆ. ಅವರ ಮುಖಾಂತರ ಹಾಗೂ ಕವಿಯ ದೂರಸಂಬಂಧಿ ವಂಶಜರು ನೀಡುವ ಮಾಹಿತಿಗಳ ಆಧಾರದ ಮೇಲೆ ಮತ್ತು ಕವಿಯ ಕೃತಿಗಳ ಆಧಾರದಿಂದ ಕವಿಯ ಜೀವನ ಚರಿತ್ರೆಯನ್ನು ಪುನರ್ರಚಿಸಲು ಸಾಧ್ಯವಾಗಿದೆ.

**ಜನನ – ಬಾಲ್ಯ :**

ಕಲಬುರ್ಗಿ ಜಿಲ್ಲೆಯ ಚಿಂಚೋಳಿ ತಾಲೂಕಿಗೆ ಸೇರಿದ ಇಂದಿನ 'ಐನೊಲಿ' ಗ್ರಾಮವೇ ಕವಿ ಕರಿಬಸವಾರ್ಯನ ಹುಟ್ಟೂರು. ಕವಿಯೇ ತನ್ನ ಕೃತಿಗಳಲ್ಲಿ ಹೇಳಿಕೊಂಡಿರುವ ಹಾಗೆ ಹಿಂದೆ ಇದನ್ನು 'ಐನೆಲೆ', 'ಐನಿಲಯ' 'ಐನಿಲಯಪುರ' ಎಂಬುದಾಗಿ ಕರೆಯುತ್ತಿದ್ದರು. ಪಶ್ಚಿಮಕ್ಕೆ ಊರಿಗೆ ಆತುಕೊಂಡಂತೆ ಉಮಾಚಲ ಬೆಟ್ಟವಿದೆ. ಸದಾ ಹಸಿರಿನಿಂದ ನಳನಳಿಸುತ್ತಿರುವ ಈ ಭೂಮಿ ಕವಿಗೆ ಜನ್ಮ ನೀಡಿದ ಪುಣ್ಯಭೂಮಿ, "ಶತಾನಂದಮೂರ್ತಿ (ನೂರಂದಯ್ಯ) ಗಿರಿಜಾದೇವಿ ಎಂಬ ಪುಣ್ಯದಂಪತಿಗಳ ಗರ್ಭದಲ್ಲಿ ಕ್ರಿ.ಶ. 1645ರಲ್ಲಿ ಕವಿ ಕರಿಬಸವಾರ್ಯ ಜನಿಸಿದನು."[5] 'ಬೆಳೆವ ಸಿರಿ ಮೊಳಕೆಯಲ್ಲಿ ಎಂಬಂತೆ' ಬಾಲ್ಯದಲ್ಲಿ ಇತರರಿಗಿಂತ ಭಿನ್ನನಾಗಿಯೇ ಇದ್ದನು. ಊರ ಪಕ್ಕಕ್ಕಿರುವ ಪ್ರಾಚೀನ ಯಮಿಜನ ತಪಸ್ಥಾನವಾದ ಉಮಾಚಲ ಬೆಟ್ಟಕ್ಕೆ ಭೋಗಲಿಂಗ ಬೆಟ್ಟವೆಂತಲೂ ಕರೆಯುತ್ತಾರೆ. ಈ ಉಮಾಚಲ ಬೆಟ್ಟದ ಮೇಲಿರುವ ಭೋಗಲಿಂದ ದೇವಾಲಯದೆದುರು ದನಕರುಗಳನ್ನು ಮೇಯಲು ಬಿಟ್ಟು, ದೇವಾಲಯದಲ್ಲಿ ಧ್ಯಾನಾಸಕ್ತನಾಗಿ ಕುಳಿತುಕೊಳ್ಳುವುದಲ್ಲದೆ, ಕಲ್ಲುಗಳ ಮೇಲೆ ಏನೇನೋ ಬರೆಯುತ್ತಿದ್ದನು. ಕೆಲವು ಸಲ 'ಓಂ' ಕಾರ ಪ್ರಣಮಾಕ್ಷರವೇ ಆದಾಗಿರುತ್ತಿತ್ತು. ಇವರ ಮನೆತನದ ಮುಖ್ಯ ಉದ್ಯೋಗ ಒಕ್ಕಲುತನವಾಗಿದ್ದು, ಬಡತನದಿಂದಾಗಿ ಕರಿಬಸವಾರ್ಯನಿಗೆ ಶಿಕ್ಷಣವನ್ನು ಕೊಡಿಸುವುದು ಆತನ ತಂದೆ–ತಾಯಿಗಳಿಗೆ ಸಾಧ್ಯವಾಗಲಿಲ್ಲ. ಇದೇ ರೀತಿ 25 ವರ್ಷಗಳು ಗತಿಸಿದವು. ಒಂದು ದಿನ ಇದನ್ನು ಗಮನಿಸಿದ ಶಿಷ್ಯನೊಬ್ಬ ಅವನನ್ನು ಓದಿಸುವ ಮಠಕ್ಕೆ ಸೇರಿಸಿದ. ಹಗಲು ದನ ಕಾಯುವುದು ರಾತ್ರಿ ಅಕ್ಷರಾಭ್ಯಾಸ ಮಾಡುವುದು, ಹಾಗೂ ಭೂಪಾಳಿಸವನ ನೀತಿಶ್ಲೋಕಗಳನ್ನು ಕಂಠಪಾಠ ಮಾಡುವುದು. ಹೀಗೆಯೇ ಒಂದೆರಡು ವರ್ಷಗಳು ಕಳೆದ ನಂತರ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಈಗಿನ ಬೀದರ ಜಿಲ್ಲೆಯ ಹುಮನಾಬಾದ ತಾಲೂಕಿಗೆ ಸೇರಿದ ಚಿಟಗುಪ್ಪೆಗೆ ಹೋದನು. ಅಲ್ಲಿ ಓದಿಸುವ ಮಠದ ಬಸವರಾಜ ಗುರುಗಳ ಹತ್ತಿರ ಅಧ್ಯಯನ ಮುಂದುವರಿಯುತ್ತಿರುವಂತೆಯೇ ಹುಟ್ಟು ಕವಿಯಾದ ಕರಿಬಸವಾರ್ಯನ ವ್ಯಕ್ತಿತ್ವದ ಆಳದಲ್ಲಡಗಿದ ಕವಿಪ್ರತಿಭೆ ಗರಿಗೆದರಿತು. ಅನುಭವ ಪದಗಳನ್ನು ರಚಿಸಿ ಹಾಡಲಾರಂಭಿಸಿದ. ಕುಲಗುರುಗಳಾದ ಚಿಟಗುಪ್ಪೆಯ ಚನ್ನವೀರೇಶ್ವರನು ಆಶೀರ್ವಡಿಸಿ ಪ್ರೋತ್ಸಾಹಿಸಿದರು. ಜೊತೆಗೆ ಹಿರಿಯ ಸಮಕಾಲೀನನೂ ಕಕ್ಕನ ಮಗನೂ ಆದ ಪವಾಡಪುರುಷ, ಅನುಭಾವಿ ಕವಿ ಬಕ್ಕ ಪ್ರಭುಗಳ ಪ್ರಭಾವ ಬೇರೆ. 'ಕುಲಗುರು ಚೆನ್ನವೀರೇಶ್ವರನ' ಅಂಕಿತವನ್ನಿಟ್ಟುಕೊಂಡು ಅನೇಕ ತತ್ವಪದಗಳನ್ನು ಬರೆದನು.

**ವಿವಾಹ–ವೈರಾಗ್ಯ :**

ತದನಂತರ ಚಿಟಗುಪ್ಪೆಯಿಂದ ಮರಳಿ ಐನೆಲೆಗೆ ಬಂದ ಕರಿಬಸವಾರ್ಯನಿಗೆ ರಾಚಮ್ಮಳೊಂದಿಗೆ ವೈವಾಹಿಕ ಬಂಧನ, ಸಂಸಾರಕ್ಕಿಂತಲೂ ಸಾಹಿತ್ಯ ಹಾಗೂ ಅಧ್ಯಾತ್ಮಗಳೆಡೆಗೆ ವಿಶೇಷ ಒಲವನ್ನಿರಿಸಿಕೊಂಡಿದ್ದ ಕರಿಬಸವಾರ್ಯನಿಗೆ ಸಂಸಾರವೊಂದು ಬಂಧನವೇ ಆಯಿತು. ಸಂಸಾರದ ಸುಖ ಭೋಗಗಳಿಗೆ ಒಗ್ಗದ ಆತನ ಮನಸ್ಸು ಭಗವಂತನ ಪ್ರೇಮಕ್ಕಾಗಿ ಕಾತರಿಸುತ್ತಿತ್ತು. ತತ್ಫಲವಾಗಿ ಪರಮಾತ್ಮನ ಅಗಲಿಕೆಯ ವಿರಹದಿಂದ ಬಳಲಿದ ಭಕ್ತನೊಬ್ಬನ ಅಂತರಂಗದ ಕೂಗು ಅವನ ಸ್ತೋತ್ರಗಳಲ್ಲಿ ಕೇಳಿ ಬಂದರೆ, ಗುರುವಿನ ಸನಿಹದಿಂದಗಲಿದ ಶಿಷ್ಯನೊಬ್ಬನ ಅಂತರಂಗದ ತಳಮಳ, ಅವನ ಸ್ವರವಚನಗಳಲ್ಲಿ ಮಾರ್ದನಿ ಪಡೆಯಿತು. ಅವನ ಒಲವು ಸಂಸಾರದಲ್ಲಿ ಸಮರಸವನ್ನು ತರದೆ, ಭಕ್ತಿ ಮತ್ತು ಜ್ಞಾನಗಳಲ್ಲಿ, ಸಾಹಿತ್ಯ ಮತ್ತು ಅಧ್ಯಾತ್ಮಗಳಲ್ಲಿ ಸಮರಸವನ್ನು ತರಲು ಪ್ರಯತ್ನಿಸಿತು. ಅವನು ಭಕ್ತಿಯಿಂದ ಸ್ತುತಿಸಿದ್ದು ಸ್ತೋತ್ರವಾದರೆ, ಅನುಭವದಿಂದ

ಭಾವುಕನಾಗಿ ನುಡಿದದ್ದು ಹಾಡಾಯಿತು. ಜನರ ಸುಖದುಃಖಗಳಿಗೆ ಸ್ಪಂದಿಸಿ, ಭಕ್ತಿಭರಿತ ಸುವ್ವಾಲೆ, ಶೋಭನ ಪದಗಳು, ಜೋಗುಳ ಪದಗಳು, ಮಂಗಳಾರತಿ ಪದಗಳು, ಕಾಮನ ಹೋಳಿ ಹಾಡುಗಳಂತಹ ಹಾಡುಗಳನ್ನು ಬರೆದನು.

ಕವಿಗೆ ವಯಸ್ಸಾಗುತ್ತ ಬಂದಂತೆ ಅನುಭವ ಪರಿಪಕ್ವಗೊಂಡು ಮುಂದೆ ಮಠಮಾನ್ಯಗಳಲ್ಲಿ ಪುರಾಣ ಹೇಳಲು ಪ್ರಾರಂಭಿಸಿದನು. ಸಾಮಾಜಿಕ, ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಜನಹಿತ ಬಯಸಿ ಸೇವೆಗೆ ತೊಡಗಿದನು. ಇದರಿಂದ ಅವನ ಸಾಹಿತ್ಯಕ ಚಟುವಟಿಕೆಗಳಿಗೆ ಮತ್ತಷ್ಟು ಅನುಕೂಲವೇ ಆಯಿತು. ಇದೇ ಸಂದರ್ಭದಲ್ಲಿ ಸಂಸ್ಕೃತದ ಅಧ್ಯಯನದೊಂದಿಗೆ ಸಂಗೀತದ ಜ್ಞಾನಾರ್ಜನೆಯೂ ಸಾಗಿತು. ತತ್ಪರಿಣಾಮವಾಗಿಯೋ ಏನೋ ತಾನು ಬರೆದ ಕೆಲವು ದ್ವಿಪದಿ, ತ್ರಿಪದಿ, ಚೌಪದಿ, ಸ್ತೋತ್ರ, ಅಷ್ಟಕ, ಮಂಗಳಾರತಿ ಮೊದಲಾದವುಗಳಿಗೆ ರಾಗಗಳನ್ನು ಹೆಸರಿಸಿದ್ದಾನೆ. ಕರಿಬಸವಾರ್ಯನ ಸಂಸಾರ ನಿರಾಸಕ್ತಿ, ಅತಿಯಾದ ಜನಸೇವೆ, ಸಾಹಿತ್ಯ ಸೇವೆಗಳು ಅವನ ಪತ್ನಿ ರಾಚಮ್ಮಳಿಗೆ ಹಿಡಿಸಲಿಲ್ಲ. ಇದರಿಂದಾಗಿ ಬೇಸರಗೊಂಡು ರಾಚಮ್ಮ ತವರಿಗೆ ಹೊರಟು ನಿಂತಾಗ ಕರಿಬಸವಾರನು–

"ನಡಿ ಹೋಗೆಲೆ ಸಖಿಯೆ ನೀನು ನಡಿ ನಡಿ
ನಡಿ ಹೋಗೆಲೆ ಸಖಿ ಆಡಿಕೊಂಬುವದ್ಯಾಕೆ
ರೂಢಿಯೊಳಗ ಶ್ರೀ ಚೆನ್ನವೀರೇಶನ ಕರುಣೆ ಇರುವನಕ"[6]

ಎಂದು ಹಾಡಿದ ಹಾಡು ಈಗಲೂ ಜನಜನಿತವಾಗಿದೆ. ಈ ದಂಪತಿಗಳಿಗೆ ಮಕ್ಕಳೂ ಆಗಿರಲಿಲ್ಲ. ಪತಿ–ಪತ್ನಿಯರ ಬಾಂಧವ್ಯವನ್ನು ಮತ್ತಷ್ಟು ಗಟ್ಟಿಗೊಳಿಸುವ ಯಾವುದೇ ಬಿಗಿಯಾದ ಬಂಧನವೂ ಇರಲಿಲ್ಲ. ಕರಿಬಸವಾರ್ಯ ಪ್ರಪಂಚದಲ್ಲಿದ್ದರೂ ಶರಣ ಜೀವಿಯಾಗಿ ಪಾರಮಾರ್ಥದ ಕಡೆಗೆ ಒಲವು ಹರಿಸಿ ಸಾಧನೆಯೆಡೆ ಹೆಜ್ಜೆ ಹಾಕಿದನು. ಪತ್ನಿ ತನ್ನನ್ನು ತೊರೆದು ತವರು ಮನೆ ಸೇರಿದರೂ, ಯಾವ ಭಾವನೆಗೂ ಎಡೆಗೊಡದೆ ಪ್ರಶಾಂತ ಮನಸ್ಸಿನಿಂದ ತನ್ನ ಬದುಕಿನ ಮುಂದಿನ ಗುರಿಗಳ ಕಡೆಗೆ ಸಾಗಿದನು. ಸಂಸಾರ ಬಂಧನದ ಮತ್ತೊಂದು ಕೊಂಡಿಯೂ ಕಳಚಿ ಬಿದ್ದಂತಾಗಿ ಸಾಮಾಜಿಕ, ಧಾರ್ಮಿಕ, ಸಾಹಿತ್ಯಕ ಸೇವಾ ಕ್ಷೇತ್ರದಲ್ಲಿ ತನ್ನನ್ನು ತಾನು ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ಇದರಿಂದ ಅವನಿಗೆ ಮತ್ತಷ್ಟು ಅನುಕೂಲವೇ ಆಯಿತು.

ಸಂಸಾರದಿಂದ ಸಂಪೂರ್ಣವಾಗಿ ವಿಮುಖನಾದ ಕರಿಬಸವಾರ್ಯ ತನ್ನ 50ನೇ ವಯಸ್ಸಿನಲ್ಲಿ ಐನೆಲೆಯಿಂದ ಚಿಂಚೋಳಿಗೆ ಬಂದು ನೆಲೆಸಿದ. "ಅದುವರೆಗೆ ಸಂಸ್ಕೃತವನ್ನು ತಕ್ಕಮಟ್ಟಿಗೆ ಬಲ್ಲವನಾಗಿದ್ದ ಕವಿ, ಈ ಸಂದರ್ಭದಲ್ಲಿ ಸಂಸ್ಕೃತದ ಅಷ್ಟಾದಶ ಪುರಾಣಗಳು, ಹಾಗೂ ಕಾಳಿದಾಸ ಮೊದಲಾದವರ ಕೃತಿಗಳ ಮೂಲಕ ಸಂಸ್ಕೃತದ ಆಳವಾದ ಅಧ್ಯಯನವನ್ನು ಕೈಕೊಂಡ."[7] ಕನ್ನಡದ ವೀರಶೈವ ಕವಿಗಳಾದ ಹರಿಹರ, ರಾಘವಾಂಕ, ಭೀಮಕವಿ, ಚಾಮರಸ, ಕೆರೆಯ ಪದ್ಮರಸ, ಗುಬ್ಬಿಯ ಮಲ್ಲಣಾರ್ಯ, ದಾರ್ಶನಿಕ ಕವಿ ನಿಜಗುಣ ಶಿವಯೋಗಿ, ಷಡಕ್ಷರ ಕವಿ, ಮೊದಲಾದವರ ಕೃತಿಗಳನ್ನು ಅಧ್ಯಯನ ಮಾಡಿದ. ಜೊತೆಗೆ ಛಂದಸ್ಸು, ವ್ಯಾಕರಣ ಗ್ರಂಥಗಳ ಹಾಗೂ ಜ್ಯೋತಿಶಾಸ್ತ್ರ, ವೈದ್ಯಶಾಸ್ತ್ರ, ಗಣಿತ ಶಾಸ್ತ್ರಗಳ ಅಧ್ಯಯನವನ್ನು ಕೈಕೊಂಡ. ಜ್ಞಾನದಾಹಿಯಾದ ಕರಿಬಸವಾರ್ಯ ಸತತಾಭ್ಯಾಸ, ಸತ್ಕಾರ್ಯ ಸತ್ಸಂಗಗಳಲ್ಲಿ ಸದಾಕಾಲವೂ ನಿತರನಾಗಿ ವೈಚಾರಿಕವಾಗಿ ಬೆಳೆದ. ಹಲವಾರು ಧಾಟಿಗಳಲ್ಲಿ ಹಲವಾರು ಛಂದಸ್ಸಿನಲ್ಲಿ ಕಾವ್ಯ ಕೃತಿಗಳನ್ನು ಹೆಣೆದ. ಅಂದಿನ ಪರಿಸರದಲ್ಲಿ ಪ್ರಚಲಿತವಾಗಿದ್ದ ಸ್ವರವಚನಗಳನ್ನಷ್ಟೇ ಅಲ್ಲದೆ ವೃತ್ತ, ಶತಕ, ಅಷ್ಟಕ, ಸ್ತೋತ್ರ, ರಗಳೆ, ಮೊದಲಾದ ಛಂದೋಬಂಧಗಳಲ್ಲಿ ಸಾಹಿತ್ಯ ಸೃಷ್ಟಿಸಿದ. ಶಿವಭಕ್ತರನ್ನು, ಶಿವ ಶರಣರನ್ನು ನಾಯಕರನ್ನಾಗಿಟ್ಟುಕೊಂಡು ಅಂದಿನ ಪರಿಸರದಲ್ಲಿ ಪ್ರಚಲಿತವಾಗಿದ್ದ 'ಅಮ್ಮವ್ವಯ ಕಥೆ' ಯಕ್ಷಗಾನವನ್ನು ಬರೆದ. 'ಸಿರಿಯಾಳನಾತ್ಮಜ ಚೀಲಾಳನ ಚರಿತದ ಪದಗಳು' ಎಂಬ ಗೀತರೂಪಕವನ್ನು ರಚಿಸಿದ. ಉತ್ತರ ಕರ್ನಾಟಕದಲ್ಲಿ ಚಂಪೂಕಾವ್ಯದ ಸುಳಿವೇ ಇಲ್ಲದ ಸಂದರ್ಭದಲ್ಲಿ 'ಸಮುದ್ರ ಮಥನ ಲೀಲಾ' ಎಂಬ ಚಂಪೂ ಕೃತಿಯೊಂದನ್ನು ರಚಿಸಿ ಚಂಪೂವಿಗೆ ಮರುಹುಟೊಂದನ್ನು ಕಲ್ಪಿಸುವುದರ ಜೊತೆಗೆ ಅದರಲ್ಲಿ ಪ್ರಯೋಗಶೀಲತೆಯನ್ನು ಮೆರೆದ. ಪುರಾಣಗಳು ಅಂದಿನ ಜನಮನದ ಮೇಲೆ ಬೀರಿದ ಪ್ರಭಾವವನ್ನರಿತು 'ರಾಜೇಶ್ವರ ಪುರಾಣ'ವನ್ನು ಬರೆದನು. ಅರ್ಹದ್ದಾಸನ ರಟ್ಟಶಾಸ್ತ್ರಕ್ಕೆ (ರಟ್ಟಮತ)ಕ್ಕೆ ಟೀಕೆಯನ್ನು ಬರೆದ. ಇದರಂತೆ ವೈವಿಧ್ಯಮಯವಾದ ಸಾಹಿತ್ಯವನ್ನು ಸೃಷ್ಟಿಸಿದ ಕವಿ ತನ್ನ 77ನೇ ವಯಸ್ಸಿನಲ್ಲಿ 'ಶ್ರೀ ಕುಮಾರ ವಿಜಯ ವಿಳಾಸಂ' ಎಂಬ ಉತ್ಕೃಷ್ಟ ಶೈಲಿಯ ಬೃಹತ್ ಕಾವ್ಯವಂದನ್ನು ರಚಿಸಿದ.

**ಶಿವಾಧೀನ :**

ಕರಿಬಸವಾರ್ಯ ಚಿಂಚೋಳಿಯಲ್ಲಿ ಬಂದು ನೆಲೆಸಿದ ನಂತರ ಸರಿ ಸುಮಾರು 45 ವರ್ಷಗಳವರೆಗೂ ಸಾಮಾಜಿಕ, ಧಾರ್ಮಿಕ, ಹಾಗೂ ಸಾಹಿತ್ಯಕ ಚಟುವಟಿಕೆಗಳಲ್ಲಿ ತೊಡಗಿದ್ದನೆಂದು ತಿಳಿದುಬರುತ್ತದೆ. ಬದುಕಿನ ವಿವಿಧ ಮುಖಗಳ ಸಾರ ಸರ್ವಸ್ವವನ್ನು ಸವಿದ ಕವಿ ಹೃದಯ 95 ವರ್ಷಗಳ ತುಂಬು ಜೀವನ ನಡೆಸಿ ಕ್ರಿ.ಶ. 1840ರಲ್ಲಿ ತನ್ನ ಅಂತ್ಯವನ್ನು ಕಂಡುಕೊಂಡಿತು. ಚಿಂಚೋಳಿಯ ಹಂಪಿಮಠದಲ್ಲಿ ಈತನ ಸಮಾಧಿ ಇದೆ. ಎಂದು ಹೇಳಲಾಗಿದೆ. ಆದರೆ ಹಂಪಿಮಠವೆಂಬುದು ಚಿಂಚೋಳಿಯಲ್ಲಿ ಇಲ್ಲವೇ ಇಲ್ಲ. ಕವಿಯ ದೂರ ಸಂಬಂಧಿ ವಂಶಜರು ಹೇಳುವಂತೆ "ಈತನ ಸಮಾಧಿ ಇರುವುದು ಚಿಂಚೋಳಿಯ ನಡುವಿನ ಮಠದಲ್ಲಿ ತಾನು ಗತಿಸಿದ ನಂತರ ತನ್ನ ಸಮಾಧಿಯನ್ನು ಜನರು ಓಡಾಡುವ ಮಾರ್ಗಮಧ್ಯದಲ್ಲಿ ಮಾಡಬೇಕು. ಮಹಾನುಭಾವರ ಪಾದಧೂಳಿಯಿಂದ ತಾನು ಪಾವನವಾಗಬೇಕು" ಎಂಬ ಇಚ್ಛೆಯನ್ನು ಕರಿಬಸವಾರ್ಯ ತನ್ನ ಅಂತಿಮ ಘಳಿಗೆಯಲ್ಲಿ ಭಕ್ತ ಜನಸಮೂಹಕ್ಕೆ ಹೇಳಿದ್ದನಂತೆ ಅವನ ಕೊನೆಯ ಆಸೆಯಂತೆ ಅವನನ್ನು ಮಠದ ಬಾಗಿಲಿನ ಮುಂಭಾಗದಲ್ಲಿ, ಜನರು ದಿನನಿತ್ಯ ಓಡಾಡುವ ಮಾರ್ಗಮಧ್ಯದಲ್ಲಿಯೇ ಸಮಾಧಿ ಮಾಡಲಾಯಿತು. ಮುಂದೆ ಕೆಲವು ವರ್ಷಗಳು ಗತಿಸಿದ ನಂತರ ಅಲ್ಲಿಗೆ ಆಗಮಿಸಿದ ಹಾರಕೂಡದ ಶ್ರೀ ಚನ್ನವೀರ ಸ್ವಾಮಿಗಳು ಆ ಸಮಾಧಿಯ ಹಾಗೂ ಶರಣ ಮಾರ್ಗಾವಲಂಬಿಯಾದ ಕವಿಯ ಉದ್ದೇಶವನ್ನು ಅರಿತು ತುಂಬ ಗೌರವಿಸಿದರಂತೆ. ಭಕ್ತ ಜನ ಸಮೂಹವನ್ನು ಕರೆದು 'ಕವಿಯ ಉದ್ದೇಶ ಅನುಪಮವಾದದ್ದು ಆದರಣೀಯವಾದದ್ದು ಅವನನ್ನು ನಾವು ಗೌರವಿಸಬೇಕು. ಆದ್ದರಿಂದ ಅವನ ಸಮಾಧಿಯನ್ನು ಈಗಿರುವ ಸ್ಥಳದಲ್ಲಿಯೇ ಇನ್ನಷ್ಟು ಎತ್ತರಗೊಳಿಸಬೇಕು. ಜನರು ಅವನನ್ನು ತುಳಿದುಕೊಂಡು ಹೋಗುವ ಬದಲು ಪ್ರದಕ್ಷಿಣೆ ಹಾಕಿ ಹೋಗುವಂತಾಗಲಿ ಎಂದು ಅವನ ಸಮಾಧಿಯನ್ನು ಎತ್ತರಗೊಳಿಸಿದರಂತೆ. ಆದರೆ ಈಗ ಚಿಂಚೋಳಿಯ ನಡುವಿನ ಮಠದಲ್ಲಿ ಅವನ ಸಮಾಧಿಯ ಯಾವ ಕುರುಹೂ ಇಲ್ಲ 10 ಮೊನ್ನೆ ಮೊನ್ನೆಯವರೆಗೂ ಪೂಜೆಗೊಳ್ಳುತ್ತಿತ್ತೆಂದು ಕಂಡವರು ಹೇಳುತ್ತಾರೆ. ಆದರೆ ಕೆಲವು ಮಷ್ಕರ್ಮಿಗಳು ತಮ್ಮ ವೈಯಕ್ತಿಕ ಸ್ವಾರ್ಥ ಸಾಧನೆಗಾಗಿ ಎಲ್ಲವನ್ನೂ ಅಸ್ತವ್ಯಸ್ತಗೊಳಿಸಿ ಸಮಾಧಿಯ ಯಾವ ಕುರುಹುಗಳೂ ಇಲ್ಲದಂತೆ ಮಾಡಿದ್ದಾರೆ. ಇದು ಕೇವಲ ಸಾಹಿತ್ಯಾಭಿಮಾನಿಗಳಿಗಷ್ಟೇ ಅಲ್ಲದೆ ಇತರರ ಮನಸ್ಸಿಗೂ ನೋವನ್ನುಂಟುಮಾಡುವ ಸಂಗತಿಯಾಗಿದೆ.

ಕರಿಬಸವಾರ್ಯ ತನ್ನ ವಂಶಾವಳಿಯ ಕುರಿತು ಅಲ್ಪಸ್ವಲ್ಪವಾಗಿ, ಮತ್ತು ಗುರುಪರಂಪರೆಯನ್ನು ಕುರಿತು ವಿವರವಾಗಿ ತನ್ನ ಬೃಹತ್ಕಾವ್ಯವಾದ ಶ್ರೀ ಕುಮಾರ ವಿಜಯ ವಿಳಾಸದ ಮೊದಲ ಅಧ್ಯಾಯದಲ್ಲಿ ಹೇಳಿಕೊಂಡಿದ್ದಾನೆ. ಕರಿಬಸವಾರ್ಯನ ಮನೆತನದಲ್ಲಿ ಅನುಭಾವಿಗಳೂ, ಜ್ಯೋತಿಷಿಗಳೂ, ವೈದ್ಯಪ್ರವೀಣರೂ ಆಗಿ ಹೋಗಿದ್ದಾರೆ. ಕರಿಬಸವಾರ್ಯನ ಕಕ್ಕನ ಮಗ ಬಕ್ಕಪ್ಪಯ್ಯನೂ ಕವಿಯಾಗಿದ್ದನು. ಈತನು ಕರಿಬಸವಾರ್ಯನ ಹಿರಿಯ ಸಮಕಾಲೀನನಾಗಿದ್ದು ಈತನ ಸಮಾಧಿಯು ಐನೆಲೆಯ ಭೋಗಲಿಂಗ ಬೆಟ್ಟದ ಪಕ್ಕದಲ್ಲಿರುವ ಇನ್ನೊಂದು ಬೆಟ್ಟ (ಈಗ ಇದಕ್ಕಿರುವ ಹೆಸರು ಗೊಟ್ಟಂಗೊಟ್ಟಿ ಬೆಟ್ಟ ಎಂಬುದಾಗಿ) ದ ಮೇಲೆ ಇದೆ. ಇವನ ಹಾಡುಗಳಲ್ಲಿ ಬರುವ ಮುದ್ರಿಕೆ, 'ಗುರುಲಿಂಗ' ಎಂದಿರುವದರಿಂದ ಈತನನ್ನು ರಾಮಪುರದ ಬಕ್ಕಪ್ಪನಿಗಿಂತ ಭಿನ್ನ ವ್ಯಕ್ತಿಯೆಂದು ಸ್ಪಷ್ಟವಾಗಿ ಹೇಳಬಹುದಾಗಿದೆ. ಈತನು ಪವಾಡ ಪುರುಷನಾಗಿದ್ದು ಕೆಲವು ಅನುಭವ ಪದಗಳು ಮಂಗಳಾರತಿಗಳು ಶೋಭನ ಪದಗಳನ್ನು ಮತ್ತು ಜೋಗುಳಗಳನ್ನು ರಚಿಸಿದ್ದಾನೆ.

"ಬಕ್ಕಪ್ಪಯ್ಯನ ಪುತ್ರನಾದ ವೀರಸಂಗಯ್ಯ ಎಂಬುವನು ಕವಿತೆಗಳನ್ನು ರಚಿಸುವಲ್ಲಿ ಕೀರ್ತಿಶೇಷನಾಗಿದ್ದಾನೆ. ಈತನ ಹಾಡುಗಳಲ್ಲಿ ಬರುವ ಮುದ್ರಿಕೆ 'ಬಸವಲಿಂಗ' ಎಂದಿರುವುದಾಗಿ ತಿಳಿದು ಬರುತ್ತದೆ."[8]

**ಬಿರುದು :**

'ಕವೀಂದ್ರ ಶಾಬಕ' 'ಕವೀಂದ್ರ ಶಾವಕ' ಶಾಬಕ ಕವಿ ಎಂಬುದು ಕರಿಬಸವಾರನ ಬಿರುದಾಗಿತ್ತೆಂದು ಅವನ ಕೃತಿಗಳಿಂದಲೇ ತಿಳಿದು ಬರುತ್ತದೆ.

"ಪರತರೈನಿಲಯ ಚೆನ್ನವೀರಶ್ರೀ
ಗುರುಕರಾಂಬುಜೋದ್ಭವ ಭೂರುದ್ರನು

ವರಕವೀಂದ್ರ ಶಾಬಕನು ನಿಮ್ಮ ಗಣ ವೃಷಭರ ಸೇವಕನು"[9]

"ವಿಳಸಿತಾದಿ ಕವೀಂದ್ರರ ಸ್ತುತಿ ಪೇಳ್ವನವ್ಯಯ್ಯ ಸೌಖ್ಯದೈ
ನಿಲಯ ಶ್ರೀಗುರು ಚೆನ್ನವೀರೇಶ ಮಹೇಶ ಹಸ್ತವನೆ....
ಕವೀಂದ್ರ ಶಾಬಕನೆಂಬ ನಾಮವನಾಂತು ಭೂ
ತಲದೊಳುತ್ತಮರ್ಯೆದೆ ಪಾಲಿಸಿ ಮೆಚ್ಚುವಂತೆ ವಿನೋದದಿಂ"[10]

"ಸಾರ ಕವಿ ಜನ ಸುಧಾಂಬುದಿ ಪೂರ್ಣಚಂದ್ರ ಕವಿ
ತಾರಾಮವರ್ಧಿತ ವಸಂತಾವಧಾನ್ಯ ಕವಿ

ತಾರಮ್ಮನರ್ತನವಧೂಟಿಕಾರಂಗ.... ವಿತತ ಸುಕವೀಂದ್ರ ಶಾವಕಾಭಿಜ್ಞಸಂಜ್ಞ"[11]

ಮೇಲಿನ ಈ ಪದ್ಯಗಳೆಲ್ಲವನ್ನೂ ನೋಡಿದಾಗ 'ಕವೀಂದ್ರ ಶಾಬಕ'ನೆಂಬ ಬಿರುದು ಪಂಡಿತ ವರ್ಗದವರು ಮನ್ನಿಸಿ ನೀಡಿದ ಬಿರುದಾಗಿತ್ತೆಂದು ತಿಳಿದುಬರುತ್ತದೆ.

"ಐನಿಲಯ ಪುರನಿವಾಸ ವೀರಸಂಗಮ ದೇವನ
ಅನುಜ ಶತಾನಂದಾಖ್ಯ ಭೂರುದ್ರನ ಪುತ್ರ ಕರಿಬಸವೈಯ್ಯನು
ಈ ನೂತನ ಕಾವ್ಯಂ ವಿರಚಿಸಿ ಬರೆದನು"[12]

ಎಂಬುದಾಗಿ 'ಕುಮಾರ ವಿಜಯ ವಿಳಾಸ' ಕೃತಿಯ ಮಂಗಲ ಪದ್ಯವೊಂದನ್ನು ಬಿಟ್ಟರೆ ಬೇರೆಲ್ಲಿಯೂ ಕವಿಯ ನಿಜನಾಮಧೇಯವು ಕಂಡುಬರುವುದಿಲ್ಲ ಅವನ ಹಾಡುಗಳಲ್ಲಿ ಚೆನ್ನವೀರೇಶನ ಮುದ್ರಿಕೆ ಇದ್ದರೆ ಶತಕ. ಅಷ್ಟಕ, ಸ್ತೋತ್ರ, ಹಾಗೂ ಇತರ ಕಾವ್ಯಗಳಲ್ಲಿ 'ಕವೀಂದ್ರ ಶಾಬಕ' 'ಶಾಬಕ ಕವಿ' ಎಂಬುದಾಗಿಯೇ ತನ್ನ ಹೆಸರನ್ನು ಹೇಳಿಕೊಂಡಿದ್ದಾನೆ.

**ಗುರು ಪರಂಪರೆ :**

ಕರಿಬಸವಾರ ತನ್ನ ಹಾಡುಗಳಲ್ಲಿ 'ಐನೆಲೆವಾಸ ಚೆನ್ನವೀರ' 'ಚೆನ್ನವೀರೇಶ' 'ಚೆನ್ನವೀರಾಖ್ಯ' 'ಚೆನ್ನವೀರ' ಹೀಗೆ ಒಂದೇ ಹೆಸರಿನ ವಿವಿಧ ಮುದ್ರಿಕೆಗಳನ್ನು ಇಟ್ಟುಕೊಂಡಿದ್ದಾನೆ. ತನ್ನ ಪ್ರತಿಯೊಂದು ಕಾವ್ಯಗಳಲ್ಲಿಯೂ ಬಿಡಿ ಹಾಡುಗಳಲ್ಲಿಯೂ ಈತ 'ಚೆನ್ನವೀರೇಶ'ನನ್ನು ಸ್ಮರಿಸಿದ್ದಾನೆ. ಇಂದಿನ ಬೀದರ್ ಜಿಲ್ಲೆಯ ಹುಮನಾಬಾದ ತಾಲೂಕಿನ ಚಿಟಗುಪ್ಪೆಯ ಚೆನ್ನವೀರ ಸ್ವಾಮಿಗಳೇ ಕವಿಯ ಮನೆತನದ ಗುರುಗಳೂ ಹಾಗೂ ಕವಿಗೆ ಅನುಗ್ರಹಿಸಿ ಸಾಹಿತ್ಯ ಸೃಷ್ಟಿಗೆ ಪ್ರೋತ್ಸಾಹಿಸಿದ ಗುರುಗಳೂ ಆಗಿದ್ದಾರೆ. ಗುರುಲಿಂಗಮುನಿ ಗುರುಪರಂಪರೆಯ ಮೂಲಪುರುಷನಾಗಿದ್ದು ಇವನು ಮೂಲತಹ ಆಂಧ್ರದೇಶದವನೆಂದು ತಿಳಿದುಬರುತ್ತದೆ.

ಗುರುಲಿಂಗಮುನಿಯ ಪರಂಪರೆಯ ಎರಡನೆಯ ವ್ಯಕ್ತಿಯೇ ಚೆನ್ನವೀರಾಖ್ಯ ಅಥವಾ ಚೆನ್ನವೀರೇಶ, ಈ ಚೆನ್ನವೀರೇಶನೆ ಗುರುಲಿಂಗಯತಿಯ ತರುವಾಯ ಮಠದ ಅಧಿಕಾರ ಸೂತ್ರಗಳನ್ನು ವಹಿಸಿಕೊಂಡನು. ಮೊದಲು ವೀರಭದ್ರಪುರದಲ್ಲಿ ನೆಲೆಸಿ ಅನಂತರ ವೀರಸಂಗ್ರಾಮ ವಿಜಯೇಂದ್ರನ ವಂಶಜರ ಪ್ರಾರ್ಥನೆಯ ಮೇರೆಗೆ ಚಿಟಗುಪ್ಪಿಯಲ್ಲಿ ಶಾಖಾಮಠವನ್ನು ಸ್ಥಾಪಿಸಿ, ಅನಂತರ ಭಕ್ತರ ಆಗ್ರಹದ ಮೇರೆಗೆ ಅಲ್ಲಿಗೆ ಬಂದು ನೆಲೆಸಿದಂತೆ ತೋರುತ್ತದೆ. ಚೆನ್ನವೀರೇಂದ್ರ, ಚೆನ್ನವೀರಣಾರ್ಯ, ಎಂಬುದಾಗಿ ವೈವಿಧ್ಯಮಯವಾಗಿ ತನ್ನ ಕಾವ್ಯಗಳಲ್ಲಿ ಹೆಸರಿಸಿರುವ ಈ ಚೆನ್ನ ವೀರೇಶನೆ ಕವಿಯ ಕುಲಗುರು ಹಾಗೂ ಅನುಗ್ರಹಿಸಿದ ಗುರು. ಈ ಚೆನ್ನವೀರಣಾರ್ಯನ ಶಿಷ್ಯ ವೀರಸಂಗಮದೇವ, ವೀರಸಂಗಮದೇವನ ತಮ್ಮನಾದ ಶತಾನಂದಮೂರ್ತಿಯೇ (ನೂರಂದಯ್ಯ) ಕವಿಯ ತಂದೆ.

**ಸಾಹಿತ್ಯ ಸೃಷ್ಟಿ :**

ಕರಿಬಸವಾರ್ಯನದು ತ್ರಿಮುಖವಾದ ಕವಿ ಪ್ರತಿಭೆ. ಈತ ಅನುಭಾವಿ ಕವಿ ಅಷ್ಟೇ ಅಲ್ಲ. ಜನಪದ ಕವಿಯೂ ಹೌದು. ಪಂಡಿತ ಕವಿಯೂ ಹೌದು. ಚಂದನಕ್ಕೆ ಕುಂದಣವಿಟ್ಟ ಹಾಗೆ ಪ್ರತಿಭೆಯ ಜೊತೆ ಪಾಂಡಿತ್ಯವೂ ಬೆರೆಯುತ್ತ ಹೋದಂತೆ ತನ್ನ ಕಾಲದಲ್ಲಿ ಹಾಗೂ ತನಗಿಂತ ಪೂರ್ವದ ಕವಿಗಳೆಲ್ಲ ಪ್ರಚಲಿತ ಗೊಳಿಸಿದ ಎಲ್ಲಾ ಛಂಧೋರೂಪಗಳನ್ನು ಬಳಸಿಕೊಂಡು ವೈವಿಧಮಯವಾದ ಕೃತಿಗಳನ್ನು ರಚಿಸಿದ್ದಾನೆ.

ಶ್ರೀ ಕುಮಾರ ವಿಜಯ ವಿಳಾಸಂ, ಭೋಗಲಿಂಗ ಶತಕ, ಬಸವೇಶ್ವವ ರಘಟಾಬಂಧಂ, ಸ್ವರ ವಚನಗಳು, ವೀರಸಂಗಯ್ಯನ ಚೌಪದನಟೀಕೆ (ಅಂಬಲಿಗೆ ಚನ್ನಮಲ್ಲಿಕವಿಯ ವೀರಸಂಗಯ್ಯನ ಚೌಪದನ ಕೃತಿಗೆ ಟೀಕೆ), ಅಮ್ಮವ್ವೆಯ ಕಥೆ (ಯಕ್ಷಗಾನ), ರಟ್ಟಶಾಸ್ತ್ರದ ಟೀಕೆ (ಅಹದ್ದಾಸನ ರಟ್ಟಮತ ಕೃತಿಗೆ ಟೀಕೆ), ಸಮುದ್ರ ಮಥನ ಲೀಲಾ, ಸಿರಿಯಾಳನಾತ್ಮಜ ಚೀಲಾಳನ ಪದಗಳು, ಬಸವೇಶ್ವರ ಪವಾಡ ಪರಿವರ್ಧಿನಿ, ರಾಜೇಶ್ವರ ಪುರಾಣ, ಚೋಳರಾಜನ ಕಥೆ, ಪುಣ್ಯಕೋಟಿ ಗಾಯತ್ರಿ ಕಥೆ, ಶಿವರಾತ್ರಿ ಕಥೆ, ಲಲಿತ ರಘಟಾಬಂಧಂ, ಕಂದ ಪದ್ಯಗಳು, ಗಣನಾಮ ರತ್ನಾವಳಿ ರಗಳೆ, ಶಿವಗಣ ಸಂಗೀತ, ಹೋಳಿ ಹಾಡುಗಳು, ನೀತಿ ರತ್ನಾಕರ, ಹರನಾಮದ ಪರಾಕ್ರಮ, ಗೀತ ಪಂಚ ವಿಂಶತಿ, ಶತಕತ್ರಯ, ಹಡಪದ ಅಪ್ಪಣ್ಣನ ಸ್ತೋತ್ರ, ಶೋಭನ ಪದಗಳು ಹೀಗೆ 28ಕ್ಕೂ ಹೆಚ್ಚು ಕೃತಿಗಳನ್ನು ಬರೆದಿದ್ದಾನೆ.

ಈ ಮೇಲಿನ ಕೃತಿಗಳಷ್ಟೇ ಅಲ್ಲದೆ ಸಂಸ್ಕೃತ ಕನ್ನಡಗಳೆರಡರಲ್ಲಿಯೂ ಕೆಲವು ಸ್ತೋತ್ರ, ಶತಕ, ಅಷ್ಟಕ, ವೃತ್ತಗಳನ್ನು ಬಿಡಿ ಬಿಡಿಯಾಗಿ ರಚನೆ ಮಾಡಿದ್ದಾನೆ. ಅಲ್ಲದೆ ಬಿಡಿ ಬಿಡಿಯಾದ ಅನೇಕ ಭಕ್ತಿ ಭರಿತ ಸುವ್ವಾಲೆಗಳು, ಶೋಭನ ಪದಗಳು, ಕಾಮನ ಹೋಳಿ ಪದಗಳು, ಮದುವೆಯ ಸಂದರ್ಭದಲ್ಲಿ ಹಾಡುವ ಪದಗಳನ್ನು ರಚಿಸಿದ್ದು ಅವು ಜನಪದ ಶೈಲಿಯಲ್ಲಿವೆ. ಕನ್ನಡದಲ್ಲಿ ಮರಾಠಿ ಮಾದರಿಯ ಅಭಂಗಗಳನ್ನು ಬರೆದಿದ್ದಾನೆ. ತೆಲುಗಿನಲ್ಲಿ ಚೆನ್ನವೀರೇಶನ ಅಂಕಿತವಿಟ್ಟು ಸ್ವರವಚನಗಳನ್ನು ರಚಿಸಿದ್ದಾನಲ್ಲದೆ ಕವಿಯ ಮನೆಯಿಂದ 'ಬಲ್ಲಾಳ ಚಾರಿತ್ರ್ಯಮು' ಎಂಬ ತೆಲುಗು ಸಾಹಿತ್ಯದ ಚರಿತ್ರೆಯಲ್ಲಿ ಇಲ್ಲದ ಹಸ್ತಪ್ರತಿಯೊಂದು ದೊರೆತಿದೆ. ಇದರಿಂದ ಕವಿ, ಕನ್ನಡ, ಸಂಸ್ಕೃತ, ತೆಲುಗು ಮರಾಠಿಗಳನ್ನು ಬಲ್ಲವನಾಗಿದ್ದನೆಂದು ಸ್ಪಷ್ಟವಾಗಿ ಹೇಳಬಹುದು.

**ಸ್ವರವಚನಗಳು:**

ಕರಿಬಸವಾರ ವಿರಚಿತ ಸಾಹಿತ್ಯದಲ್ಲಿ ನಂತರದ ಮಹತ್ವದ ಸ್ಥಾನವನ್ನು ಪಡೆದುಕೊಳ್ಳುವುದು ಆತನ ಸ್ವರವಚನಗಳು. ಆತನ ಅನೇಕ ಸ್ವರವಚನಗಳು ಅವನ ಆಳವಾದ ಆಧ್ಯಾತ್ಮಿಕ ಅನುಭವದ ಪ್ರತೀಕಗಳಾಗಿವೆ. ಅವುಗಳ ಸಂಖ್ಯೆ ಅಪಾರವಾಗಿದ್ದು ಬೇರೆ ಬೇರೆ ಹಸ್ತಪ್ರತಿಗಳಲ್ಲಿ ಹರಿದು ಹಂಚಿಹೋಗಿವೆ. ಕೆಲವು ಸ್ವರವಚನಗಳು ಜನಪ್ರಿಯವಾಗಿದ್ದು ಅವು ಕಂಠಸ್ಥವಾಗಿಯೇ ಉಳಿದಿವೆ. ಇದುವರೆಗೆ ಸುಮಾರು ಒಟ್ಟು 263 ಸ್ವರವಚನಗಳು ದೊರಕಿದ್ದು ಅವುಗಳಲ್ಲಿ ಭಗವಂತನ ಕುರಿತಾಗಿ ಭಕ್ತನಿಗಿರುವ ಅನನ್ಯವಾದ ಭಕ್ತಿ, ನಿಷ್ಠೆ, ಅವನ ಪ್ರಾರ್ಥನಾಪರವಾದ ಸ್ವರವಚನಗಳಲ್ಲಿ ವ್ಯಕ್ತವಾಗಿದೆ.

ಸ್ತುತಿಪರವಾದ ಹಾಡುಗಳಲ್ಲಿ ಶಿವಶಕ್ತಿಯರ ಅನುಪಮವಾದ ಲೀಲಾ ವಿಲಾಸವನ್ನು, ಹಾಗೂ ಲಿಂಗಸ್ತುತಿಯನ್ನು ಪ್ರೌಢವಾದ ಭಾಷೆಯಲ್ಲಿ ವರ್ಣಿಸಿದ್ದಾನೆ. ಕವೀಂದ್ರ ಸ್ತೋತ್ರದಲ್ಲಿ ಪೂರ್ವದ ಶೈವ ಹಾಗೂ ವೀರಶೈವ ಕವಿಗಳನ್ನು ಸ್ತುತಿಸುತ್ತ ಅವರ ಪ್ರತಿಭೆ ಪಾಂಡಿತ್ಯ ತನಗೆ ಒದಗಿ ಬರಲಿ ಎಂದು ಪ್ರಾರ್ಥಿಸುತ್ತಾನೆ.

ಪ್ರಾರ್ಥನಾ ಪರವಾದ ಹಾಡುಗಳಲ್ಲಿ ಘೋರ ಸಂಸಾರವೆಂಬ ಗೊಂಡಾರಣ್ಯದೊಳು ದಾರಿ ತಪ್ಪಿದ ಎಳೆಯ ಹುಲ್ಲೆಯಂತೆ ತಳಮಳಿಸುವ ಭಕ್ತನೊಬ್ಬನ ಅಂತರಂಗದ ಕೂಗು ಮಾರ್ದನಿ ಪಡೆದಿದ್ದನ್ನಿಲ್ಲಿ ಕಾಣಬಹುದು.

'ರೋಷ ವಿಷಯಾತುರದ ರೋಗ ದುಃಖದ ಭರದ
ಹೇಸಿ ಸಂಸ್ಕೃತಿಯಿಂದ ಹೆದರಿ ನೊಂದೆನು ತಂದೆ
ಎಂದು ನೊಂದು ನುಡಿಯುತ್ತಾನೆ.
ಕಾಮಾದಿ ಷಟ್ಕರ್ಕುರಗಳು ದುಷ್ಟ

ತಾಮಸಾದಿ ಅಷ್ಟದಂತಿಗಳು
ಬೊಮ್ಮಿಸುವವೆನ್ನೊಳಗೆ ಜೊಂಗುಳಿ ಗೊಳಿಸುತಿಗೆ
ಸಾಮಾನ್ಯ ಗುಣವಳಿದು ಸದೃಷಂಗಳ ಕಳೆದು'

ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ಆರೂ ಕ್ರೂರ ಚಿರತೆಗಳು ಹಾಗೂ ಅಷ್ಟಮದಗಳೆಂಬ ಬಲವಾದ ಆನೆಗಳನ್ನು ಕಟ್ಟಿ ತನ್ನಡಿಯಲ್ಲಿರಿಸಿಕೊಳ್ಳುವಂತೆ ಪ್ರಾಣಲಿಂಗೇಶನನ್ನು ಪ್ರಾರ್ಥಿಸುತ್ತಾನೆ.

'ತೆರೆಹಿಲ್ಲದ ಜನ್ಮ ತೆರೆಯೊಳು
ತಿರುಗಿ ಬಾಡಿ ಬಳಲಿ ಅಳಲಿ
ದುರಹಂಕಾರ ಗತಿ ದುರ್ಗತಿ
ಶರದಿ ಕಿಚ್ಚಿನಿಂದೆ ಬೆಂದೆ
ಪರಮ ದುಃಖದ ಭಯ ಪರಿಮೋಹಾತುರ
ಪರಿಷದಂತದೊಳು ಪೊರಳಿ ನರಳಿ ಬಾ
ಯ್ದೆರೆದು ಪರವಶದೊಳರಗಿ ಮರೆದವನ
ಕರವ ಪಿಡಿದೆಳೆದು ಪೊರೆಯೊಳಿರಿಸು'

ಎಂಬುದಾಗಿ ಜನ್ಮಜನ್ಮಾಂತರಗಳಲ್ಲಿ ತಿರುತಿರುಗಿ ಬಸವಳಿವ ಆತ್ಮನಿಗೆ ಅಂಟಿಕೊಂಡಿರುವ ದುಃಖ, ಭಯ, ಮೋಹ, ಆತುರ, ಅಹಂಕಾರಗಳನ್ನು ಬಿಡಿಸಿ ಮುಕ್ತಿಯನ್ನು ಕರುಣಿಸುವಂತೆ ಗುರುವಿನ ಮೊರೆ ಹೋಗುತ್ತಾನೆ.

ಗುರುವೆ ನೋಡು ನಿತ್ಯ ಘೋರ
ತರ ಭವಾಬ್ಧಿಯೊಳು ತಲ್ಲಣಿಸುವ

ಗುರುವೆ ನೋಡು, ಕೈವಿಡಿದು ಕಾಪಾಡು ಎಂದು ಮೊರೆಯಿಡುತ್ತಾನೆ. ಕವಿದು ಸುತ್ತಿಕೊಂಡ ಸಂಸಾರದ ಕಲುಷಪಾಶವನ್ನು ಕಡಿಯಲಾಗದೆ ಮಾಯದ ಮೊಳಕೆಗಳನ್ನು ಕೀಳಲಾಗದೆ ? ಭವಬಾಧೆ ಪಡಲಾರೆನು.

ಸಂಸಾರ ಸುಖವದು ಜೇನಿಗೆ ಸಮವಾಗಿ
ಜೇನೊಳು ಸಿಲ್ಕಿದ ನೊಣದ ಪರಿಯಾಗಿ
ಭವರೋಗ ಬಡತನ ಮತ್ತೆ ಮಹಾವ್ಯಾಧಿಗಳು
ಅಜ್ಞಾನ ಕತ್ತಲು ಸುತ್ತುಗಟ್ಟಿತೋ ದೇವಾ (ಭವಬಾಧೆ ಪಡಲಾರೆನೊ)

ಎಂದು ಪರಿಪರಿಯಾಗಿ ಪರಿತಪಿಸುತ್ತಾನೆ. ಸಂಸಾರ ಸುಖವು ಜೇನಿಗೆ ಸಮನಾದರೆ ಮಾನವನನ್ನು ಅದರ ಸವಿಗೆ ಆಸೆಪಟ್ಟು ಸಿಲುಕಿಕೊಳ್ಳುವ ನೊಣಕ್ಕೆ ಹೋಲಿಸಿದ್ದಾನೆ. ಆಸೆಪಟ್ಟು ಘಾಸಿಗೊಳಗಾಗುವ ಮನವನ್ನು ಭವರೋಗದಿಂದ ಮುಕ್ತಗೊಳಿಸುವಂತೆ ಗುರುವಿನಲ್ಲಿ ಪ್ರಾರ್ಥಿಸುತ್ತಾನೆ.

'ಕಡಲೊಳುದಿಸಿದ ಅಗ್ನಿ ಕಡಲ ನುಂಗುವ ತೆರದಿ
ಗಿಡದೊಳುದಿಸಿ ಕಿಚ್ಚು ಗಿಡವ ಸುಡುವಂತೆ
ಒಡಹುಟ್ಟಿದನುಜರನು ಯಿನಸುತಲೆಂಬಂತೆ
ಎನ್ನ ಮನವೆನ್ನ ಸುಡುತಲಿಹುದು
ಓಡ್ಯಾಡುವ ಮನಸು ತಡೆಹಿಡಿಯಲಾರೆ
ತಡ ಮಾಡದಲೆ ದಡಕೆ ಸೇರಿಸೂ ಒಡೆಯ
ನಾ ನಿಮ್ಮ ನಂಬಿದೆ. (ಶೀಶಕಮಲವೃತ್ತ)

ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆ ವ್ಯರ್ಥ, ಸಂಸಾರ ಸುಖಕೆ ನಾ ಮನಕೊಟ್ಟೆ, ಬಲುಕಟ್ಟೆ ಎಂಬುದಾಗಿ ತನ್ನ ಮನೋವ್ಯಾಪಾರವನ್ನರುಹುತ್ತಾನೆ. ಕಡಲೊಳುಟ್ಟಿದಗ್ನಿ ಕಡಲನ್ನೇ ನುಂಗುವಂತೆ, ಒಡಲೊಳ್ಳುಟ್ಟಿದ ಮನವು ಒಡಲೊಡೆಯನನ್ನೇ ತರಿದುರುಳಿಸುತ್ತದೆ.

ಸತ್ಯಶರಣರೊಳೊಲಿದು ನಿತ್ಯನಾಂ ಕೂಡಿರದೆ
ಮಿಥ್ಯ ಸುಖ ಕೆಳಸಿ ನಾಂಕೆಟ್ಟೆ
ನೃತ್ಯನಾಗಿರದೆ ನಾ ಬಿಟ್ಟೆ ದುಷ್ಟ ಕೃತ್ಯಗಳಿಗಾನು ಮನವಿಟ್ಟೆ (ತ್ವಂ ಶಾರದಾ)

ಕ್ರೂರಮನವೆಂಬ ಕಾಂತಾರದಲ್ಲಿ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ಆರು ಕ್ರೂರ ಮೃಗಗಳು, ಅವುಗಳೊಡನೆ ಅಷ್ಟಮದಗಳೆಂಬ ಮದಹಸ್ತಿಗಳು ಜೀವನ ಯಾನ ಮಧ್ಯದಲ್ಲಿ ಅಜ್ಞಾನವೆಂಬ ಕಾಳ ಕತ್ತಲು ಇವೆಲ್ಲವುಗಳ ನಡುವೆ ದಾರಿ ಕಾಣದೆ ಗೋಳಿಡುವ ಜೀವಾತ್ಮನಲ್ಲಿಗೆ ಪರಮಾತ್ಮನೆಂಬ ಬೇಟೆಗಾರ ಬಂದು ಆರು ಕ್ರೂರ ಮೃಗಗಳನ್ನು ಎಂಟು ಮದ ಹಸ್ತಿಗಳನ್ನು ತರಿದಿಕ್ಕಿ ಹೊರದೂಡಿ ಅವನ ಮನೋಕಾಂತಾರದಲ್ಲಿ ನೆಲೆಗೊಳ್ಳಬೇಕು. ಮನವೆಂಬ ಕಪಿಯಂಗ ಮನದೊಳಗೆ ಚರಿಸುತ ಘನ ಚೇಷ್ಟೆಗಳು ತೋರುವದು ಮೂರು ಯಿನಿದಾದ ಫಲಕೆ ಹಾರುವದು ಮಲೆದು ತನುವುಬ್ಬಿ ತಾನೆ ಚೀರುವುದು.

'ಮನವೆಂಬ ಕಪಿಯಂಗ ಮನದೊಳಗೆ ಚರಿಸುತ
ಘನ ಚೇಷ್ಟೇಗಳು ತೋರುವದು ಮೂರು
ಯಿನಿದಾದ ಫಲಕೆ ಹಾರುವದು ಮಲೆದು
ತನುವುಬ್ಬಿ ತಾನೆ ಚೀರುವುದು'

ಮನವೆಂಬ ಮರ್ಕಟನು ಅಂಗವೆಂಬ ವನದೊಳಗೆ ಚರಿಸುತ್ತ ಮಲತ್ರಯಗಳೆಂಬ (ಆಣವಮಲ ಮಾಯಾಮಲ, ಕಾರ್ಮಿಕಮಲ) ಮೂರು ಫಲಗಳನ್ನು ಮನವಾರ ಮೆಲಿದು, ಮಲೆತು ಮೆರೆಯುವ ಮುನ್ನ ಅಷ್ಟದಳಗಳನಡರಿ ಸನಲಿದು, ಅಷ್ಟಮದವೆಂಬ ದಿಕ್ಕುಗಳೆಡೆ ನೆಗೆವ ಮುನ್ನ ಗುರುಮಂತ್ರವೆಂಬ ಪಾಶದಿ ಹಿಡಿದು ಹೆಡಮುರಿಕಟ್ಟಿ ತನ್ನ ಪಾದದಡಿಯಲ್ಲಿರಿಸಿಕೊಳ್ಳುವಂತೆ ಗುರು ಚನ್ನವೀರೇಶನನ್ನು ಬೇಡಿಕೊಳ್ಳುತ್ತಾನೆ. ಕರಿಬಸವಾರ್ಯ ಸ್ವರವಚನಗಳಲ್ಲಿ ಪ್ರಾರ್ಥನಾಪರವಾದ ಹಾಡುಗಳೇ ಅಧಿಕವಾಗಿದ್ದು ಹೆಚ್ಚು ಸಂಸ್ಕೃತ ಭೂಯಿಷ್ಟವಾಗಿವೆ.

ದಾಂಪತ್ಯ ಜೀವನದಲ್ಲಿನ ಹೆಣ್ಣು ಗಂಡುಗಳ ಮರಸ್ಯೈಕ್ಯ ಭಾವವನ್ನು ಜೀವಾತ್ಮ ಪರಮಾತ್ಮರಿಗೆ ಅನ್ವಯಿಸುವ ಪ್ರಯತ್ನವನ್ನು ಭಾರತೀಯ ಆಧ್ಯಾತ್ಮಿಕ ಪರಂಪರೆಯಲ್ಲಿ ಕಾಣುತ್ತೇವೆ. ಸತಿಪತಿ ಭಾವದಲ್ಲಿ ಜೀವಾತ್ಮ ಪರಮಾತ್ಮರ ಅನುಸಂಧಾನವನ್ನು ಲೌಕಿಕ ಜಗತ್ತಿನ ಹೆಣ್ಣುಗಂಡುಗಳ ಸಾಮರಸ್ಯ ಪೂರ್ಣ ಪ್ರೇಮಾನು ಸಂಧಾನದೊಂದಿಗೆ ಹೋಲಿಸಲಾಗಿದೆ. ಸತಿಪತಿಭಾವದ ಭಕ್ತಿಭಾವವು ಶಾಂತ, ದಾಸ್ಯ, ಸಖ್ಯ, ವಾತ್ಸಲ್ಯ, ಮಧುರ ಎಂಬ ಐದುಭಾವಗಳಲ್ಲಿ ವ್ಯಕ್ತವಾಗುತ್ತಿದ್ದು, ಕರಿಬಸವಾರ ವಿರಚಿತ ಸ್ವರವಚನಗಳಲ್ಲಿ ಸಖ್ಯ ಮತ್ತು ಮಧುರ ಭಾವದ ಭಕ್ತಿಯನ್ನು ನಾವು ಕಾಣುತ್ತೇವೆ. ಆತ್ಮ ಶೋಧನೆಯುಳ್ಳ ಹಾಗೂ ಸತಿಪತಿಭಾವ ಶೃಂಗಾರ ಪರವಾದ ವಚನಗಳಲ್ಲಿ ಪತಿಯೆಂಬ ಗುರುವಿನ ಸಾನಿಧ್ಯಕ್ಕಾಗಿ ಹಂಬಲಿಸುವ ಸತಿಯೆಂಬ ಶಿಷ್ಯನ ಅಗಲಿಕೆಯ ವಿರಹದ ಕೂಗು ಮಾರ್ದನಿ ಪಡೆದಿದೆ. ಪ್ರಿಯಕರನ ವಿರಹವೇದನೆಯ ದಳ್ಳುರಿಯಲ್ಲಿ ಬೇಯುವ ಪ್ರಿಯೆಯ ಚಿತ್ರವನ್ನು ಕರಿಬಸವಾರ ತನ್ನ ಸ್ವರವಚನಗಳಲ್ಲಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಾನೆ.

ಮಾನವನ ಭವ್ಯ ವ್ಯಕ್ತಿತ್ವವು ಸೃಷ್ಟಿಯ ಒಂದು ರಹಸ್ಯವೇ ಸರಿ. ಮಾನವನಿಗೆ ತನ್ನಲ್ಲಿ ಅಡಗಿದ ನಿಜಸುಖವನ್ನು ಅರಿಯುವದು ಬ್ರಹ್ಮಲೀಲೆಯೆಂದು ಹೇಳುತ್ತಾನೆ. ಆಧಾರ, ಸ್ವಾದಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞೆಗಳೆಂಬ ಷಟ್‌ಚಕ್ರಗಳ ಮೇಲೇರಿ, ಈಡಾ ಪಿಂಗಳ ಸುಷುಮ್ನಗಳೆಂಬ ತ್ರಿಮಂಡಲದ ನಡುವೆ ಬೆರೆತು, ಒಂದಾಗುವ, ಭ್ರೂಮಧ್ಯವೆಂಬ ಮಹಾಮೇರುವಿನ ಮಧ್ಯದಲ್ಲಿ ಸತತವಾಗಿ ತೋರುತ್ತಿರುವ ಶಿವಬೀಜಾಕ್ಷರವಾದ 'ಓಂ' ಎಂಬ ಚಿಜ್ಯೋತಿಯನ್ನು, ಶಿವಪದವಿಯನ್ನು ನೀನು ಪಡೆ ಎಂದು ಮನಸ್ಸಿಗೆ ಹೇಳುತ್ತಾನೆ. ಹಮ್ಮನಳಿದು ನಿಜ ಬ್ರಹ್ಮವ ತಿಳಿಯದೆ ಸುಮ್ಮನೆ ದೊರಕದು ಶಿವಪದ ಮತ್ತಿನ್ನೆಲ್ಲಿ ನೋಡಿದರೂ ಕೋವಿದರೆಲ್ಲ ತಿಳಿದುಕೊಳ್ಳುವುದಿನ್ನು ದೇವರೊಬ್ಬನೆ ಎಂದು ಏಕೋಭಾವ ಏಕೋದೈವ ತತ್ವವನ್ನು ಜನರಿಗೆ ಅರುಹುತ್ತಾನೆ.

ಯಾವುದೂ ನಮ್ಮ ಮನದಿಚ್ಛೆಯಂತೆ ಸಾಗದು. ಎಲ್ಲವೂ ದೇವರಿಚ್ಛೆಯಿದ್ದಂತಾಗುವುದು. ನಮ್ಮಂತೆ ಬಯಸುವುದು ಕೇವಲ ನಮ್ಮ ಭ್ರಮೆ. ಆ ಭ್ರಮೆಯ ಪೊರೆ ಹರಿದು ಹೊರಬಂದು ನಿಜ ಬ್ರಹ್ಮವ ತಿಳಿಯಲು ಪ್ರಯತ್ನಿಸಬೇಕು. ನಿಜಬ್ರಹ್ಮವ ತಿಳಿಯಬೇಕಾದರೆ ಮೊದಲು ತಾನು ಯಾರು? ಎಂಬುದನ್ನು ತಿಳಿದುಕೊಂಡಿ ಗುರುಕರಣೆಯನ್ನು ಪಡೆದು ನಿಜಮುಕ್ತಿಯೋಗದಲ್ಲಿ ನಿರತನಾಗಿರಬೇಕೆಂಬುದು ಕವಿಯ ಹಾರೈಕೆ. ಮಾನವ ಸದಾ

ಕರಿಬಸವಾರ್ಯನ ಸ್ವರವಚನಗಳು ಭಾಷೆಯ ದೃಷ್ಟಿಯಿಂದ ಹೆಚ್ಚು ಸಂಸ್ಕೃತ ಭೂಯಿಷ್ಟವಾಗಿವೆ ಎಂದೆನಿಸಿದರೂ ಅವುಗಳಲ್ಲಿ ಭಕ್ತಿಯ ಮಹಾಪೂರವಿದೆ, ಜ್ಞಾನವಿದೆ, ವೈರಾಗ್ಯವಿದೆ. ಜೀವದ ಅನಿತ್ಯತೆ ಮತ್ತು ಮುಕ್ತಿಯ ಹಂಬಲ ಎದ್ದು ಕಾಣುತ್ತದೆ. ಜೀವಾತ್ಮ ಪರಮಾತ್ಮರ ನಡುವಿನ ಅನನ್ಯವಾದ ಸಂಬಂಧವು ಅವನ ಆತ್ಮಶೋಧನೆಯುಳ್ಳ ಹಾಡುಗಳಲ್ಲಿ ಪ್ರತಿಬಿಂಬಿತವಾದರೆ, ಆಧ್ಯಾತ್ಮ, ನೀತಿಬೋಧೆ, ಯೋಗವಿಚಾರ, ಮತ್ತು ಸಾಮಾಜಿಕ ವಿಡಂಬನೆಯನ್ನು, ನೀತಿ–ಬೆಡಗು–ತತ್ವವಿಲಾಸದ ಕುರಿತಾದ ಹಾಡುಗಳಲ್ಲಿ ಕಾಣುತ್ತೇವೆ. ಮೊದಮೊದಲು ಭಕ್ತಿ, ಜ್ಞಾನ, ವೈರಾಗ್ಯ, ಆಧ್ಯಾತ್ಮದಂತಹ ವಿಷಯಗಳಿಗೆ ಸೀಮಿತವಾಗಿದ್ದ ಸ್ವರವಚನಗಳು, ಮುಂದೆ ಬರುಬರುತ್ತ ಸಾಮಾಜಿಕ, ನೈತಿಕ ವಿಷಯಗಳನ್ನೊಳಗೊಂಡು ವ್ಯಾಪಕವಾದ ಪ್ರಚಾರವನ್ನು ಪಡೆದದ್ದು ಕಂಡುಬರುತ್ತದೆ.

ಒಟ್ಟಾರೆಯಾಗಿ ಕರಿಬಸವಾರ್ಯ ಪ್ರಯೋಗಶೀಲ ಮನೋಭಾವವುಳ್ಳ ಕವಿ, ಹಾಗೂ ಸ್ವರವಚನಕಾರ. ಅಷ್ಟೇ ಅಲ್ಲದೆ ಅವನೊಬ್ಬ ಆಧ್ಯಾತ್ಮದ ಅಮೃತರಸವನ್ನುಂಡ ಅನುಭಾವಿ. ತಾನು ಕಂಡುಂಡ ದರ್ಶನದ ಅಮೃತರಸವನ್ನು ಜನಮನಕ್ಕೆ ಧಾರೆಯೆರೆದ ಸಮಾಜ ಜೀವಿ.

**ಕೊನೆಯ ಟಿಪ್ಪಣಿ:**

1. ವೀರಣ್ಣ ರಾಜೂರ, ಸ್ವರವಚನಗಳ ಉಗಮ– ಸ್ವರೂಪ – ಲಕ್ಷಣ, ಪುಟ–20
2. ಈಶ್ವರಯ್ಯ ಮಠ, ಸ್ವರವಚನಗಳು ಮತ್ತು ಕಡಕೋಳ ಮಡಿವಾಳಪ್ಪನವರು, ಪುಟ–253
3. ವಿಜಿ. ಪೂಜಾರ (ಸಂ), ರಾಮಪುರದ ಬಕ್ಕಪ್ಪಯ್ಯನ ಸ್ವರವಚನ ತ್ರಿವಿಧಿ, ಪ್ರಸ್ತಾವನೆ ಪುಟ–6
4. ಶಿವಣ್ಣ, (ಸಂ), ಕರಿಬಸವಾರ್ಯ, ಬಸವೇಶ್ವರ ರಘಟಾಬಂಧಂ' ಬಸವ ಪಥ, ಅಕ್ಟೋಬರ್ 1981
5. ಎಂ.ಜಿ. ಬಿರಾದಾರ, ಎಸ್. ಡಿ. ಸವದತ್ತಿಮಠ, ಎಸ್. ಲಕ್ಕೆ, ಕುಮಾರ ವಿಜಯ ವಿಳಾಸಂ, ಪ್ರಸ್ತಾವನೆ ಪುಟ–8.
6. ವಿರುಪಾಕ್ಷಯ್ಯ ಸ್ವಾಮಿ ಮಠಪತಿ, ಐನೂಲಿ, : ಹೇಳಿದವರು, ಅನುಭವ ಪದಗಳು
7. ಮೇಲಿನ ಈ ಎಲ್ಲ ಕವಿಗಳ ಪ್ರಭಾವ ಕರಿಬಸವಾರನ ಕಾವ್ಯಗಳಲ್ಲೆಲ್ಲಾ ದಟ್ಟವಾಗಿ ಮೂಡಿದೆ. ಕವಿಯ ಮನೆಯಲ್ಲಿ ಮೇಲಿನ ಕವಿಗಳ ಕೃತಿಗಳ ಹಸ್ತಪ್ರತಿಗಳು ದೊರಕಿವೆ. ಜೊತೆಗೆ ಕೇಶಿರಾಜನ 'ಶಬ್ದಮಣಿದರ್ಪಣ' ಮತ್ತು ವೈದ್ಯಶಾಸ್ತ್ರದ ಕೃತಿಗಳು, ಜ್ಯೋತಿಶಾಸ್ತ್ರದ ಕೃತಿಗಳು ಗಣಿತಶಾಸ್ತ್ರದ ಹಸ್ತಪ್ರತಿಗಳು ದೊರಕಿವೆ. ಅಲ್ಲದೆ ಕವಿಯ ಮನೆಯಿಂದ 'ನೃಪತುಂಗಾಭ್ಯುದಯಂ' ಎಂದು ಬೇರೆ ಹೆಸರಿನಿಂದ ಕರೆಯಲ್ಪಟ್ಟ ಶ್ರೀವಿಜಯನ ಕವಿರಾಜ ಮಾರ್ಗದ ಹಸ್ತಪ್ರತಿಯೊಂದು ಡಾ॥ ಎಂ.ಎಂ. ಕಲಬುರ್ಗಿಯವರಿಗೆ ದೊರಕಿದೆ.
8. ಮಹಾದೇವಿ ಹಿರೇಮಠ : ಐನುಲಿ ಕರಿಬಸವಾರ್ಯ : ಒಂದು ಅಧ್ಯಯನ, ಗುಲಬರ್ಗಾ
9. ಕರಿ ಬಸವಾರ್ಯ: ಗುರುಬಸವ ಪವಾಡ ಚರಿತೆ ಹಸ್ತಪ್ರತಿ
10. ಕರಿಬಸವಾರ್ಯ: ಕವೀಂದ್ರ ಸ್ತೋತ್ರ.
11. ಕರಿಬಸವಾರ್ಯ : ಶ್ರೀ ಕುಮಾರ ವಿಜಯ ವಿಳಾಸಂ, ಪು. 8, ಪದ್ಯ 34,
12. ಅದೇ, ಮಂಗಲಪದ್ಯ,